ಕರ್ನಾಟಕ ವಿಧಾನಸಭೆ

ಶುಕ್ರವಾರ 30ನೇ ಜೂನ್ 2006ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 32 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಪ್ರಶ್ನೋತ್ತರ

(ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ರೈತ ಸಂಪರ್ಕ ಕೇಂದ್ರಗಳಲ್ಲಿ ಖಾಲಿ ಇರುವ ಕೃಷಿ ಅಧಿಕಾರಿಗಳ ನೇಮಕಾತಿ

180(998) ಶ್ರೀ ಧ್ರುವನಾರಾಯಣ ಆರ್. (ಸಂತೆಮರಳ್ಳಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ರೈತ ಸಂಪರ್ಕ ಕೇಂದ್ರಗಳ ಸಂಖ್ಯೆ ಎಷ್ಟು;

ಆ) ರೈತ ಸಂಪರ್ಕ ಕೇಂದ್ರಗಳಲ್ಲಿ ಕೃಷಿ ಅಧಿಕಾರಿಗಳ ಹಾಗೂ ಕೃಷಿ ಸಹಾಯಕರ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು;

ಇ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಬಂಡೆಪ್ಪಾ ಕಾಶಂಪೂರ (ಕೃಷಿ ಸಚಿವರು) :

ಅ) 745.

ಆ) ಕೃಷಿ ಅಧಿಕಾರಿಗಳು –499

ಕೃಷಿ ಸಹಾಯಕರು –407

ಇ) ಖಾಲಿ ಇರುವ ಕೃಷಿ ಅಧಿಕಾರಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಕೃಷಿ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಸ್ಥಗಿತಗೊಳಿಸಲಾಗಿದೆ. ಭರ್ತಿ ಮಾಡಲು ಸಧ್ಯ ಯಾವುದೇ ಪ್ರಸ್ತಾವನೆಗಳು ಸರ್ಕಾರದ ಮುಂದಿರುವುದಿಲ್ಲ.

ಶ್ರೀ ಆರ್. ಧ್ರುವನಾರಾಯಣ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ನಾನು ಕೇಳಿರತಕ್ಕಂತಹ ಪ್ರಶ್ನೆ, ರಾಜ್ಯದಲ್ಲಿರುವ ರೈತ ಸಂಪರ್ಕ ಕೇಂದ್ರಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದೇನೆ. ಉತ್ತರದಲ್ಲಿ 745 ಎಂದು ಹೇಳಿದ್ದಾರೆ. ಸಂಪರ್ಕ ಕೇಂದ್ರಗಳಲ್ಲಿ ಖಾಲಿ ಇರತಕ್ಕಂತಹ ಕೃಷಿ ಅಧಿಕಾರಿಗಳು ಹಾಗೂ ಕೃಷಿ ಸಹಾಯಕರ ಹುದ್ದೆಗಳು ಎಷ್ಟು ಎಂದು ಕೇಳಿದ್ದೇನೆ. ಕೃಷಿ ಅಧಿಕಾರಿಗಳು 499, ಕೃಷಿ ಸಹಾಯಕರು 407 ಎಂದು ಉತ್ತರದಲ್ಲಿ ಹೇಳಿದ್ದಾರೆ. ಎಂದರೆ ಹೋಬಳಿಗೊಂದು ಕೃಷಿ ಸಂಪರ್ಕ ಕೇಂದ್ರಗಳು ಇರತಕ್ಕಂಥದ್ದರಲ್ಲಿ, Each RSK is headed by an Agriculture Officer supported by Assistant Agriculture Officer

and Agriculture Assistant. ಒಂದು ರೈತ ಸಂಪರ್ಕ ಕೇಂದ್ರಕ್ಕೆ ಕೃಷಿ ಸಹಾಯಕ ಅಧಿಕಾರಿಗಳು ಮತ್ತು ಕೃಷಿ ಸಹಾಯಕರು ಒಬ್ಬರು ಇರಬೇಕು. ಇವತ್ತು ರಾಜ್ಯದಲ್ಲಿ 745 ರೈತ ಸಂಪರ್ಕ ಕೇಂದ್ರಗಳು ಇದ್ದರೆ ಬಹುತೇಕ ಶೇಕಡಾ 70 ಭಾಗ ರೈತ ಸಂಪರ್ಕ ಕೇಂದ್ರಗಳಲ್ಲಿ ಕೃಷಿ ಸಹಾಯಕರ ಹುದ್ದೆ ಹಾಗೂ ಕೃಷಿ ಅಧಿಕಾರಿಗಳ ಹುದ್ದೆ ಖಾಲಿ ಇವೆ. ಅವುಗಳನ್ನು ಭರ್ತಿ ಮಾಡಿಲ್ಲ. ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಉತ್ತರದಲ್ಲಿ ಕೃಷಿ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಸ್ಥಗಿತಗೊಳಿಸಲಾಗಿದೆ ಎಂದು ಹೇಳಿದ್ದಾರೆ. ಕೃಷಿ ಅಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವುದು ಪರಿಶೀಲನೆಯಲ್ಲಿದೆ ಎಂದು ಹೇಳುತ್ತಾರೆ. ಇವತ್ತು ಈ ರೈತ ಸಂಪರ್ಕ ಕೇಂದ್ರದ ಕಾನ್‌ಸೆಪ್ಟ್ ಏನಿದೆ ಅಂದರೆ ಮಾಹಿತಿ ಒದಗಿಸತಕ್ಕಂಥದ್ದು, ಆಧುನಿಕ ಕೃಷಿ ಬಗ್ಗೆ ಮಾಹಿತಿ ಕೊಡತಕ್ಕಂಥದ್ದು. ಆದರೆ ಇವತ್ತು ರೈತ ಸಂಪರ್ಕ ಕೇಂದ್ರಗಳು ಬರೀ ಗೊಬ್ಬರ ಮತ್ತು ಬೀಜದ ಮಾರಾಟ ಕೇಂದ್ರಗಳಾಗಿವೆ ವಿನಃ ಅವು ನಿಜವಾಗಿಯೂ ಟೆಕ್ನಿಕಲ್ ನಾಲೆಡ್ಜ್ ಕೊಡತಕ್ಕಂತಹ ರೈತರಿಗೆ ಮಾಹಿತಿ ಕೊಡತಕ್ಕಂತಹ ಕೇಂದ್ರಗಳಾಗಿಲ್ಲ. ಇವತ್ತು ಹೊಸದಾಗಿ ಬಂದಿರುವಂತಹ ಸಚಿವರೂ ಕೂಡ ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿಯೇ ಓದಿದವರು. ಕೃಷಿ ಅಧಿಕಾರಿಗಳು ಮತ್ತು ಕೃಷಿ ಸಹಾಯಕರ ಹುದ್ದೆಗಳು ಶೇಕಡಾ 70 ಭಾಗ ಖಾಲಿ ಇದ್ದಾಗ ಇವರು ಯಾವ ರೀತಿ ರೈತರಿಗೆ ಮಾಹಿತಿ ಕೊಡಲು ಆಗುತ್ತದೆ. ಈ ಕೇಂದ್ರಗಳಿಂದ ರೈತರಿಗೆ ಹೇಗೆ ಒಳ್ಳೆಯ ಕೆಲಸಗಳು ಆಗುತ್ತವೆ ಎಂದು ತಾವು ನಿಜವಾಗಿಯೂ ಯೋಚನೆ ಮಾಡಬೇಕು. ಮಾನ್ಯ ಸಚಿವರು ಈ ಬಗ್ಗೆ ಸಮರ್ಪಕವಾಗಿ ಉತ್ತರ ಕೊಡಬೇಕು. ತಾವು ತಕ್ಷಣ ಈ ಕೃಷಿ ಸಹಾಯಕರು ಮತ್ತು ಕೃಷಿ ಅಧಿಕಾರಿಗಳ ಹುದ್ದೆಗಳನ್ನು ಮಾಡಬೇಕೆಂದು ನಾನು ಅಧ್ಯಕ್ಷರ ಮುಖೇನ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಂಡೆಪ್ಪಾ ಕಾಶಂಪೂರ್ : ಮಾನ್ಯ ಅಧ್ಯಕ್ಷರೆ, ಸದಸ್ಯರು ಹೇಳುವುದು ಸರಿ ಇದೆ. ಏಕೆಂದರೆ ಬಹಳಷ್ಟು ಹುದ್ದೆಗಳು ಖಾಲಿ ಇವೆ. ಆದರೆ ಈ ಸರ್ಕಾರ ಬಂದ ಮೇಲೆ ಆ ಹುದ್ದೆಗಳನ್ನು ಭರ್ತಿ ಮಾಡುವ ಕಡೆಗಳಲ್ಲಿ ಸುಮಾರು 700 ಟೆಕ್ನಿಕಲ್ ಪೋಸ್ಟ್‌ಗಳನ್ನು ಈಗಾಗಲೇ ಪ್ರೋಸೆಸ್ ಮಾಡಿ ಕ್ಯಾಬಿನೆಟ್ ಮುಂದೆ ತಂದು, ಅಪ್ರೂವ್ ಆಗಿ ಆರ್ಥಿಕ ಇಲಾಖೆಗೆ ಹೋಗಿದೆ. ಅಲ್ಲಿಂದ ಕ್ಲೀಯರ್ ಆಗಿ ಕ್ಯಾಬಿನೆಟ್‌ಗೆ ಬಂದ ತಕ್ಷಣ ಈ 700 ಪೋಸ್ಟ್‌ಗಳನ್ನು ತುಂಬುತ್ತೇವೆ. ರೈತ ಸಂಪರ್ಕ ಕೇಂದ್ರಗಳಲ್ಲಿ 499 ಪೋಸ್ಟ್‌ಗಳು ಇವೆ. ಅದಕ್ಕೆ ಬಿಟ್ಟು ಬೇರೆ ಕಡೆಗಳಲ್ಲಿಯೂ ಖಾಲಿ ಇವೆ.

ಶ್ರೀ ಆರ್. ಧ್ರುವನಾರಾಯಣ : ಮಾನ್ಯ ಅಧ್ಯಕ್ಷರೆ, ರೈತ ಸಂಪರ್ಕ ಕೇಂದ್ರಗಳಲ್ಲಿ ಇರತಕ್ಕಂಥದ್ದು 749 ಅದರಲ್ಲಿ 490 ಎಂದರೆ ಶೇಕಡ 70 ಖಾಲಿ ಇವೆ.

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ಅಧ್ಯಕ್ಷರೆ, ಇವತ್ತೇ ಖಾಲಿ ಆಗಿಲ್ಲ, ಬಹಳ ದಿವಸಗಳಿಂದ ಖಾಲಿ ಬಿದ್ದಿವೆ. ಅದಕ್ಕೆ ನಾವು ಪ್ರಸ್ತಾವನೆಯನ್ನು ಇಮ್ಮಿಡಿಯಟ್ಟಾಗಿ ತೆಗೆದುಕೊಂಡು ಪ್ರೊಸೆಸ್ ಮಾಡಿ ಆರ್ಥಿಕ ಇಲಾಖೆಗೆ ಕಳುಹಿಸಿದ್ದೇವೆ. ಈಗಾಗಲೇ ನಮ್ಮ ಕಡೆಯಿಂದ ಪ್ರಸ್ತಾವನೆ

ಹೋಗಿದೆ. ಇನ್ನು ಸ್ವಲ್ಪ ದಿನಗಳಲ್ಲಿ ಅದನ್ನು ಕ್ಯಾಬಿನೆಟ್ ಮುಂದೆ ತಂದು ಈ ಹುದ್ದೆಗಳನ್ನು ಭರ್ತಿ ಮಾಡುವ ಕೆಲಸ ಶೀಘ್ರದಲ್ಲಿಯೇ ಮಾಡುತ್ತೇವೆಂದು ಸನ್ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಆರ್. ಧ್ರುವನಾರಾಯಣ್ : ಮಾನ್ಯ ಅಧ್ಯಕ್ಷರೆ, ಇವರು ಕೃಷಿ ಸಹಾಯಕರ ಬಗ್ಗೆ ಹೇಳಲಿಲ್ಲ. ಕೃಷಿ ಅಧಿಕಾರಿಗಳ ಬಗ್ಗೆ ಹೇಳಿದರು.

ಶ್ರೀ ಬಂಡೆಪ್ಪ ಕಾಶಂಪೂರ್ : ತಮಗೆ ಗೊತ್ತಿದೆ, ಮುಂದಿನ ದಿನಗಳಲ್ಲಿ.....

ಅಧ್ಯಕ್ಷರು : ಪಾಟೀಲರೇ, ಯಾರು ಪ್ರಶ್ನೆ ಕೇಳಿರುತ್ತಾರೆ ಅವರಿಗೆ ಎರಡು ಉಪ ಪ್ರಶ್ನೆ ಕೇಳುವುದಕ್ಕೆ ಅವಕಾಶ ಇದೆ. ದಯಮಾಡಿ ಕೇಳಿ. ಇಲ್ಲದಿದ್ದರೆ ಒಂದು ಗಂಟೆಗೆ ಪ್ರಶ್ನೋತ್ತರವನ್ನು ನಿಲ್ಲಿಸುತ್ತೇನೆ. ನಾನು ಬಹಳ ದಿನ ಈ ರೀತಿ ಮಾಡಲು ಆಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್.ಎಸ್. ಪಾಟೀಲ್ : ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ.

ಅಧ್ಯಕ್ಷರು : ಎಲ್ಲಾ ರಾಜ್ಯದ ಪ್ರಶ್ನೆಗಳೇ. ಈಗ ಅವಕಾಶ ಕೊಡುವುದಕ್ಕಾಗುವುದಿಲ್ಲ. ಬೇರೆ ರೂಪದಲ್ಲಿ ನೋಟಿಸ್ ತೆಗೆದುಕೊಂಡು ಬನ್ನಿ. ನಾನು ಅವಕಾಶ ಮಾಡಿ ಕೊಡುತ್ತೇನೆ. ಒಂದು ಗಂಟೆಯೊಳಗೆ ಪ್ರಶ್ನೋತ್ತರ ಮುಗಿಯಬೇಕಾಗಿದೆ.

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ತೀರ್ಮಾನ ತೆಗೆದುಕೊಂಡ ಹಾಗೆ ಕೃಷಿ ಸಹಾಯಕರ ಹುದ್ದೆಗಳನ್ನು ಮುಂದಿನ ದಿನಗಳಲ್ಲಿ ಟೆಕ್ನಿಕಲ್ ಪೋಸ್ಟ್‌ಗಳನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿದೆ. Non-technical ಆಗಿ ಇರಬಾರದು ಎಂದು ಹೇಳಿ ಹಿಂದಿನ ಸರ್ಕಾರ ತೀರ್ಮಾನ ತೆಗೆದುಕೊಂಡಿತ್ತು. ಅದಕ್ಕೋಸ್ಕರ ಕೃಷಿ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡುವ ಪ್ರಶ್ನೆ ಬರುವುದಿಲ್ಲ.

ಶ್ರೀ ಆರ್. ಧ್ರುವನಾರಾಯಣ : ಮಾನ್ಯ ಅಧ್ಯಕ್ಷರೆ, ಈ ರೈತ ಸಂಪರ್ಕ ಕೇಂದ್ರಗಳಲ್ಲಿ ನಿಜವಾಗಿಯೂ ಆಧುನೀಕರಣವಾಗಬೇಕು. ರೈತ ಸಂಪರ್ಕ ಕೇಂದ್ರಗಳಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ಆಗುತ್ತಿಲ್ಲ. ನಾನು ಹೇಳಿದ ಹಾಗೆ ಬರೀ ಗೊಬ್ಬರ ಮಾರುವುದು, ಬೀಜ ಮಾರುವುದು ಇಷ್ಟೇ ಆಗುತ್ತಿದೆ.

ಶ್ರೀ ಬಂಡೆಪ್ಪ ಕಾಶಂಪೂರ್ : ಮಾನ್ಯ ಅಧ್ಯಕ್ಷರೆ, ಸ್ವಲ್ಪ ದಿನಗಳಲ್ಲಿ ಸುಮಾರು ಛೇಂಜಸ್ ತರುತ್ತಿದ್ದೇವೆ. ನಮ್ಮ ಯೂನಿವರ್ಸಿಟಿಗಳಿಗೆ ಹೇಳಿ ಸೈಂಟಿಸ್ಟ್‌ಗಳನ್ನು ಉಸ್ತುವಾರಿಗೆ ಹಾಕಬೇಕೆಂದು ನಾವು ಯೋಜನೆ ರೂಪಿಸುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಬಹಳ ಒಳ್ಳೆಯ ರೀತಿಯಲ್ಲಿ ರೈತ ಸಂಪರ್ಕ ಕೇಂದ್ರಗಳು ನಡೆಯುತ್ತಿವೆ ಎಂಬ ಭರವಸೆಯನ್ನು ನಾವು ತಮಗೆ ಕೊಡುತ್ತೇನೆ.

ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿ ಎಲೆ ಮಲ್ಲಪ್ಪ ಶೆಟ್ಟಿ ಕೆರೆಯಲ್ಲಿನ ಮೀನುಗಾರಿಕೆಯಲ್ಲಿ ಆದಾಯ.

181 (541) ಶ್ರೀ ನಾಗರಾಜು ಎಂ.ಟಿ.ಬಿ. (ಹೊಸಕೋಟೆ) : ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?